# ಹಬ್ಬಗಳ ಸಂಭ್ರಮಕ್ಕೆ ಮಂಗಳಗಿರಿ ಸೀರೆ

ಇಂದು ರೇಷ್ಮೆ ಸೀರೆಗಳಿಗಿಂತಲೂ ಹೆಚ್ಚು ಕಾಟನ್‌ಸಿಲ್ಕ್ ಮತ್ತು ಹ್ಯಾಂಡ್‌ಲೂಮ್ ಸೀರೆಗಳು ಹಬ್ಬ ಹರಿದಿನಗಳಲ್ಲಿ ಉಡಲೆಂದೇ ತಯಾರಿಸಿದಂತಿವೆ. ಈ ಹ್ಯಾಂಡ್‌ಲೂಮ್ ಸಿಲ್ಕ್ ಸೀರೆಗಳು ಗರಿಗರಿಯಾಗಿ ಉಡಲು ಚೆನ್ನಾಗಿರುತ್ತವೆ. ಮಂಗಳಗಿರಿ ಸೀರೆಗಳನ್ನು ಕಾಟನ್ ಸಿಲ್ಕ್ ಫ್ಯಾಬ್ರಿಕ್ಸ್‌ನಿಂದ ತಯಾರಿಸಲಾಗುತ್ತಿದ್ದು, ಹೊಂಬಣ್ಣದ ದಾರದಿಂದ ಮಾಡಿದ ಬಾರ್ಡರ್ ಅಥವಾ ಝರಿ ಬಾರ್ಡರ್‌ನಿಂದ ಸೀರೆ ಆಕರ್ಷಕವಾಗಿ ಕಾಣುತ್ತದೆ. ಕಡು ಬಣ್ಣಗಳಲ್ಲಿರುವ ಈ ಸೀರೆಗಳು ನೋಡಲೂ ಚಂದ. ಉಡುವುದೂ ಆರಾಮದಾಯಕ ಎನ್ನುವುದು ಮಹಿಳೆಯರ ಅಭಿಪ್ರಾಯ.

ಮಂಗಳಗಿರಿ ಸೀರೆಯ ಮೇಲಿನ ವಿನ್ಯಾಸವನ್ನು 'ನಿಜಾಮ್ ಡಿಸೈನ್ಸ್' ಎಂದೂ ಕರೆಯಲಾಗುತ್ತದೆ. ಈ ಸೀರೆಗಳು ವಿಜಯವಾಡದಲ್ಲಿ ತಯಾರಾಗುತ್ತಿದ್ದು, ಇದೀಗ ಫ್ಯಾಷನ್ ಟ್ರೆಂಡ್ ಆಗಿಯೂ ಜನಪ್ರಿಯವಾಗಿದೆ.

ಮಂಗಳಗಿರಿ ಸೀರೆಯಲ್ಲಿ ಎಲೆಯಾಕಾರ, ಮಾವಿನ ಕಾಯಿ ವಿನ್ಯಾಸ, ಗಿಣಿ, ಚಿನ್ನದ ನಾಣ್ಯದ ವಿನ್ಯಾಸಗಳು ಹೆಚ್ಚು ಜನಪ್ರಿಯವಾಗಿವೆ. ಮಂಗಳಗಿರಿ ಸೀರೆಯಲ್ಲಿರುವ ಎಂಬ್ರಾಯಿಡರಿ ಮಹಿಳೆಯರಿಗೆ ಈ ಉಡುಪಿನ ಮೇಲೆ ಹೆಚ್ಚಿನ ಮೋಹ ಉಂಟಾಗುವಂತೆ ಮಾಡಿದೆ. ಈ ಸೀರೆ 1500 ರೂಪಾಯಿಗಳಿಂದ 10 ಸಾವಿರ ರೂಪಾಯಿಗಳವರೆಗೂ ಸಿಗುತ್ತದೆ.

ಆನ್‌ಲೈನ್‌ನಲ್ಲಿಯೂ ಮಂಗಳಗಿರಿ ಸೀರೆಗಳು ಲಭ್ಯ. ದೈನಂದಿನ ಕಚೇರಿ ಬಳಕೆಗೆ ಕಾಟನ್ ಸೀರೆಗಳು ಸೂಕ್ತವಾದರೆ, ಸಣ್ಣಪುಟ್ಟ ಫ್ಯಾಮಿಲಿ ಪಾರ್ಟಿಗಳಿಗೆ, ಮದುವೆ ರಿಸೆಪ್ಷನ್‌ಗಳಿಗೆ ಮಂಗಳಗಿರಿ ಸಿಲ್ಕ್ ಸೀರೆಗಳು ಚೆನ್ನಾಗಿ ಒಪ್ಪುತ್ತವೆ. ಜರಿ ಬಾರ್ಡರ್ ಹಾಗೂ ಪ್ರಿಂಟೆಡ್ ಪಲ್ಲು ಸೀರೆಗಳು ಮದುವೆಯಂತಹ ಅದ್ದೂರಿ ಕಾರ್ಯಕ್ರಮಗಳಿಗೆ ಸರಿಹೊಂದುತ್ತವೆ. ಈ ಎಲ್ಲ ಸೀರೆಗಳನ್ನು ವಯೋಮಾನದ ಭೇದವಿಲ್ಲದೆ ಯಾರು ಬೇಕಾದರೂ ಆರಾಮವಾಗಿ ಉಟ್ಟುಕೊಳ್ಳಬಹುದು.







ಬೊಮ್ಕಾಯಿ ಸೀರೆಗಳಿಗೆ 'ಸೋನೆಪುರಿ' ಸೀರೆ ಎಂಬ ಹೆಸರೂ ಇದೆ. ಒರಿಸ್ಸಾದ ಭುಲಿಯ ಎಂಬ ಜನಾಂಗದವರು ಈ ಸೀರೆಯ ನೇಯ್ಗೆ ಮಾಡುತ್ತಾರೆ. ಸೀರೆ ಮಾತ್ರವಲ್ಲದೆ ದುಪಟ್ಟಾ, ಸೋನೆಪುರಿ ಶಾಲುಗಳು, ಹ್ಯಾಂಡ್‌ಲೂಮ್ ಸೀರೆಗಳೂ ಸಾಕಷ್ಟು ಜನಪ್ರಿಯವಾಗಿವೆ. ಫ್ಯಾಷನೆಬಲ್ ಆಗಿಯೂ ಇರುವುದರಿಂದ ಮಹಿಳೆಯರು ಇಷ್ಟಪಟ್ಟು ಕೊಳ್ಳುತ್ತಾರೆ. ಬಾಲಿವುಡ್ ತಾರೆ ಐಶ್ವರ್ಯ ರೈ ತನ್ನ ಮದುವೆಯಲ್ಲಿ ಬೊಮ್ಕಾಯಿ ಸೀರೆ ಉಟ್ಟು ಮಿಂಚಿದ್ದರಿಂದಲೂ ಈ ಸೀರೆ ಮತ್ತಷ್ಟು ಜನಪ್ರಿಯವಾಗಿದ್ದಲ್ಲದೆ ಮಹಿಳೆಯರು ಇದೇ ಸೀರೆಯನ್ನು ಮುಗಿಬಿದ್ದು ಕೊಳ್ಳಲಾರಂಭಿಸಿದರು.

ಒರಿಸ್ಸಾ, ಬೆಂಗಳೂರು, ಮುಂಬಯಿ, ಕೋಲ್ಕತ್ತಾ ಸೇರಿದಂತೆ ದೇಶದ ನಾನಾ ಭಾಗಗಳಲ್ಲಿ ಮಹಿಳೆಯರು ಇಷ್ಟಪಟ್ಟು ಕೊಳ್ಳುವ ಸೀರೆ ಇದೀಗ ವಿದೇಶಗಳಲ್ಲೂ ಜನಪ್ರಿಯವಾಗಿದೆ. ಆಕರ್ಷಕ ಬಣ್ಣ, ಕಾಟನ್ ಮತ್ತು ಸಿಲ್ಕ್ ಫ್ಯಾಬ್ರಿಕ್ ಮೇಲೆ ಇಕತ್ ಹಾಗೂ ಎಂಬ್ರಾಯಿಡರಿಗಳಿಂದ ಹದವಾಗಿ ನೇಯ್ಗೆ ಮಾಡಿರುವ ಬೊಮ್ಕಾಯಿ ಸೀರೆಗಳು ಯುವತಿಯರ ಮೆಚ್ಚು ಆಗಿದೆ.

ಜನಪ್ರಿಯತೆಯ ಹಾದಿ ಹಿಡಿದರುವ ಬೊಮ್ಕಾಯಿ ಸೀರೆಗಳು ಇತ್ತೀಚೆಗೆ ಜನ್ಮ ತಾಳಿದ್ದಲ್ಲ. ಇದಕ್ಕೆ ಶತಮಾನಗಳ ಇತಿಹಾಸ ಇದೆ ಎಂಬುದು ಅಚ್ಚರಿ ಹುಟ್ಟಿಸುತ್ತದೆ. ಸುಮಾರು ಹದಿನೆಂಟನೆ ಶತಮಾನದಿಂದಲೂ ಈ ಸೀರೆಗಳು ಚಾಲ್ತಿಯಲ್ಲಿತ್ತು ಎನ್ನುತ್ತದೆ ಸೀರೆ ಚರಿತ್ರೆ. ಹೊಸ ಹೊಸ ತಂತ್ರಜ್ಞಾನ, ಆಧುನಿಕ ವಿನ್ಯಾಸ, ಆಕರ್ಷಕ ಶೈಲಿ ಹಾಗೂ ಹೆಚ್ಚುತ್ತಿರುವ ಬೇಡಿಕೆಗಳಿಂದಾಗಿ ಇಂದು ಬೊಮ್ಕಾಯಿ ಸೀರೆಗಳು ಮತ್ತೆ ಬೆಳಕಿಗೆ ಬಂದಿದೆ. ಕಡುಬಣ್ಣದ ಸೀರೆ, ಸೀರೆಯ ಪಲ್ಲು ಅತ್ಯಂತ ಸೊಗಸಾಗಿದೆ. ■